


# ಮತ್ತೊಂದು ಮಕ್ಕಳ ದಿನಾಚರಣೆ ಬಂದಿದೆ.

'ಮಕ್ಕಳ ದಿನಾಚರಣೆಯನ್ನು ಏಕೆ ಆಚರಿಸಬೇಕು?' ಎಂದು ಕೇಳಿದರೆ ಹೆಚ್ಚಿನವರು ಹೇಳುವುದು 'ಮಕ್ಕಳು ದೇಶದ ಭಾವೀ ಪ್ರಜೆಗಳು. ಹೀಗಾಗಿ ಅವರಿಗೆ ಪ್ರಾಮುಖ್ಯತೆ ನೀಡಬೇಕು' ಎಂದು. ನಮ್ಮ ದೃಷ್ಟಿಯಲ್ಲಿ ಮಕ್ಕಳು ಎಂದರೆ ಉತ್ತಮ ಪ್ರಜೆಗಳು ಎಂಬ ಸಿದ್ಧ ಸರಕನ್ನು ತಯಾರಿಸಲು ಉಪಯೋಗಿಸಬೇಕಾದ ಕಚ್ಚಾವಸ್ತು ಅಂತಾಯಿತಲ್ಲವೇ? ಹಾಗಾಗಿ ಮಗುವಿಗೆ ಎರಡು ವರ್ಷವಾಗುವಷ್ಟರಲ್ಲೇ ಉತ್ತಮ ಪ್ರಜೆಯನ್ನು ಮಾಡುವ ಪೋಷಕರ ಧಾವಂತ ಶುರುವಾಗಿರುತ್ತದೆ. ಇಲ್ಲಿಂದಲೇ ಶುರುವಾಗುತ್ತದೆ ಮಕ್ಕಳ ಮೇಲಿನ ಒತ್ತಡಗಳು. ಮಕ್ಕಳು ನಮ್ಮೆಲ್ಲರ ಬದುಕಿನ ಅನನ್ಯವಾದ ಆನಂದ ಎಂದು ನಮಗ್ಯಾರಿಗೂ ಅನ್ನಿಸುವುದೇ ಇಲ್ಲವೇ?

'ನಿಮ್ಮ ಮಕ್ಕಳನ್ನು ಏನು ಮಾಡಬೇಕೆಂದಿದ್ದೀರಿ?' ಎನ್ನುವ ಪ್ರಶ್ನೆಯನ್ನು ಪುಟ್ಟ ಮಕ್ಕಳಿರುವ ಯಾವುದೇ ತಂದೆ–ತಾಯಂದಿರಿಗೆ ಕೇಳಿದ ತಕ್ಷಣ ಅವರು ಸಾಮಾನ್ಯವಾಗಿ 'ಸಾಫ್ಟ್‌ವೇರ್ ಎಂಜಿನಿಯರ್, ಡಾಕ್ಟರ್, ಚಾರ್ಟರ್ಡ್ ಅಕೌಂಟೆಂಟ್, ಕಂಪೆನಿ ಸೆಕ್ರೆಟರಿ, ಲಾಯರ್..' ಹೀಗೆ ಯಾವುದೋ ವೃತ್ತಿಯ ಬಗೆಗೆ ಮಾತನಾಡತೊಡಗುತ್ತಾರೆ. ಅಂದರೆ ಪೋಷಕರು ತಮ್ಮ ಮಕ್ಕಳ ಮೆದುಳಿನಲ್ಲಿ ಬುದ್ಧಿಯ ಜೊತೆಗೆ ಭಾವನೆಗಳೂ ಇರುತ್ತವೆ; ಮಕ್ಕಳಿಗೆ ಒಂದು ಮುಗ್ಧ ಮನಸ್ಸಿದೆ, ಹೃದಯವಿದೆ, ರಂಗುರಂಗಿನ ಬಾಲ್ಯವಿದೆ ಎನ್ನುವುದನ್ನೆಲ್ಲಾ ಸಂಪೂರ್ಣ ಮರೆತಂತೆ ಕಾಣುತ್ತದೆ. ಮಕ್ಕಳನ್ನು ತಮಗೆ ಸರಿಯೆನಿಸುವ ವೃತ್ತಿಗಾಗಿ ತಯಾರು ಮಾಡುವ ಗಡಿಬಿಡಿಯಲ್ಲಿ ಮನಸ್ಸುಗಳು, ಸಂಬಂಧಗಳು